Crl Mis– 142/2026

ಪಿ. ಡಬ್ಲ್ಯೂ.ನಂ. - 1

ದಿನಾಂಕ:13.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ.ಎಂ.ಜೆಡ್ ವಕೀಲರಿಂದ –**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ನಿಜ ಇರುತ್ತದೆ.

ಅಲಭ್ಯ ಪ್ರಮಾಣ ಪತ್ರವನ್ನು ನಿಪಿ–1 ಎಂದು, ಶಾಲಾ ವರ್ಗಾವಣಾ ಪ್ರಮಾಣ ಪತ್ರ ಮತ್ತು ಆಧಾರ್ ಕಾರ್ಡ್ ನ ನೋಟರಿ ಪ್ರತಿಗಳನ್ನು ಮೂಲ ದಾಖಲೆಗಳೊಂದಿಗೆ ಹೋಲಿಸಿ ತಾಳೆಯಾಗಿದ್ದರಿಂದ ಅವುಗಳನ್ನು ನಿಪಿ–2 ಮತ್ತು 3 ಎಂದು ಗುರುತಿಸಲಾಯಿತು. ಮೂಲ ದಾಖಲೆಗಳನ್ನು ವಾಪಾಸ್ಸು ನೀಡಲಾಯಿತು.

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಾದ ಶ್ರೀ ಎಂ.ಆರ್. ರವರಿಂದ**

ನಾನು ದಿನಾಂಕ 10.05.1970 ರಂದು ಜನಿಸಿದ್ದೇನೆ ಎಂದು ಹೇಳುತ್ತಿದ್ದು ದಿಃ 17.06.2026 ರ ಪೂರ್ವದಲ್ಲಿ ಜನನ ಪ್ರಮಾಣ ಪತ್ರ ಕೋರಿ ನನ್ನ ಪೋಷಕರು ಯಾವುದೇ ಅರ್ಜಿಯನ್ನು ಎದುರುದಾರರ ಕಚೇರಿಗೆ ನೀಡಿರುವುದಿಲ್ಲ. ದಿನಾಂಕ 10.05.1970 ರಂದು ಎದುರುದಾರರ ಕಚೇರಿಗೆ ನನ್ನ ಜನನದ ಕುರಿತು ನನ್ನ ಪೋಷಕರು ಮೌಖಿಕವಾಗಿ ಮಾಹಿತಿಯನ್ನು ನೀಡಿದ್ದಾರೆ. ನಾವು ನಿಗದಿತ ಕಾಲಾವಧಿಯಲ್ಲಿ ಜನನ ಪ್ರಮಾಣ ಪತ್ರಕ್ಕಾಗಿ ಅರ್ಜಿಯನ್ನು ಸಲ್ಲಿಸದ ಕಾರಣ ಪ್ರಸ್ತುತ ಅರ್ಜಿಯಲ್ಲಿ ಕೋರಿರುವಂತೆ ನಾನು ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಸಾಗರ.